ಕರ್ನಾಟಕ ಸರ್ಕಾರ

**ಸಂಖ್ಯೆ:** ಡಿಟಿಇ/462/ಎಸಿಎಂ(2)/2012-13

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:18-05-2013.

**-::: ಸುತ್ತೋಲೆ :::-**

**ವಿಷಯ:** 2013-14ನೇ ಸಾಲಿನ ಪ್ರಥಮ ಸೆಮಿಸ್ಟರ್ ಡಿಪ್ಲೋಮಾ ಪ್ರವೇಶ ಬಯಸುವ ಅಭ್ಯರ್ಥಿಗಳ ಜಾತಿ & ಆದಾಯ ಪ್ರಮಾಣ ಪತ್ರದ ಕುರಿತು.

**-0000000-**

2013-14ನೇ ಸಾಲಿನ ಪ್ರಥಮ ಸೆಮಿಸ್ಟರ್ ಡಿಪ್ಲೋಮಾ ಪ್ರವೇಶಕ್ಕೆ ಸಂಬಂಧಿಸಿದಂತೆ, ಈಗಾಗಲೇ ಅರ್ಜಿ ಮಾಹಿತಿ ಪುಸ್ತಕವನ್ನು ವಿತರಿಸಲಾಗುತ್ತಿದ್ದು, ವಿವಿಧ ಮೀಸಲಾತಿ ಪ್ರವರ್ಗಗಳಡಿಯಲ್ಲಿ ಪ್ರಥಮ ಸೆಮಿಸ್ಟರ್ ಡಿಪ್ಲೋಮಾ ಪ್ರವೇಶ ಬಯಸಿ ಅರ್ಜಿ ಸಲ್ಲಿಸುತ್ತಿರುವ ಕೆಲವು ಅಭ್ಯರ್ಥಿಗಳಿಗೆ ಸಂಬಂಧಪಟ್ಟ ತಾಲ್ಲೂಕು ಕಛೇರಿಗಳಿಂದ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ದೊರೆಯುವುದು ವಿಳಂಬವಾಗುತ್ತಿದೆ ಎಂದು ನಿರ್ದೇನಾಲಯಕ್ಕೆ ಗಮನಕ್ಕೆ ಬಂದಿರುತ್ತದೆ. ಅಭ್ಯರ್ಥಿಗಳು ಈಗಾಗಲೇ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳಿಗೆ ತಾಲ್ಲೂಕು ಕಛೇರಿಗಳಲ್ಲಿ ಅರ್ಜಿ ಸಲ್ಲಿಸಿ, ಸ್ವೀಕೃತಿ ಪತ್ರವನ್ನು ಪಡೆದಿರುವ ಅಭ್ಯರ್ಥಿಗಳು ಮೌಖಿಕ ಹೇಳಿಕೆಯಂತೆ ಆದಾಯವನ್ನು ಆನ್‌ಲೈನ್ ಅರ್ಜಿಯಲ್ಲಿ ನಮೂದಿಸುವುದು. ಹಾಗೂ ಅಭ್ಯರ್ಥಿಯ ವರ್ಗಾವಣೆ ಪತ್ರದಲ್ಲಿ ನಮೂದಿಸಿರುವ ಜಾತಿ ಮತ್ತು ಉಪಜಾತಿಯನ್ನು ಪರಿಶೀಲಿಸಿ ಯಾವ ಪ್ರವರ್ಗದಡಿಯಲ್ಲಿ ಮೀಸಲಾತಿಗೆ ಅವಕಾಶವಿದೆಯೇ ಆ ಪ್ರವರ್ಗವನ್ನು ಆನ್‌ಲೈನ್ ಅರ್ಜಿಯಲ್ಲಿ ನಮೂದಿಸುವುದು. ದಾಖಲಾತಿ ಪರಿಶೀಲನೆ ನಂತರ ನೀಡುವ ಸ್ವೀಕೃತಿ ಕಾರ್ಡ್ (Acknowledgement Card)ನಲ್ಲಿ ಸದರಿ ಅಭ್ಯರ್ಥಿಯ ಜಾತಿ ಮತ್ತು ಆದಾಯ ಪ್ರಮಾಣ ಪತ್ರದ ಮುಂದೆ 'ಬಾಕಿ' ಎಂದು ನಮೂದಿಸಿ ವಿತರಿಸುವುದು. ಸದರಿ ಅಭ್ಯರ್ಥಿಯು ಸೀಟು ಆಯ್ಕೆಗಾಗಿ Online Interactive Counseling ಕೇಂದ್ರದಲ್ಲಿ ಭಾಗವಹಿಸುವ ಪೂರ್ವದಲ್ಲೇ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು Online Application Submission/Document Verification Centre ನಲ್ಲೇ ಪರಿಶೀಲನೆಗೊಳಪಡಿಸಿ 'ಬಾಕಿ' ಎಂದುದಕ್ಕೆ ತಿರುವಳಿ ಪಡೆಯುವುದು ಕಡ್ಡಾಯವಾಗಿದೆ. ಪ್ರಯುಕ್ತ, ಅಭ್ಯರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಪರಿಗಣಿಸಿ ಮಾನ್ಯ ನಿರ್ದೇಶಕರಿಂದ ಸದರಿ ಕ್ರಮವನ್ನು ಜರುಗಿಸಲು ಈ ಮೂಲಕ ತಿಳಿಸಲು ನಿರ್ದೇಶಿತನಾಗಿದ್ದೇನೆ.

ಜಂಟಿ ನಿರ್ದೇಶಕರು(ಆಡಳಿತ)

ಇವರಿಗೆ,

ಎಲ್ಲಾ 45 ಸರ್ಕಾರಿ ಮತ್ತು ಅನುದಾನಿತ ಪಾಲಿಟೆಕ್ನಿಕ್‌ಗಳ (Online Application Submission/Document Verification Centre) ಪ್ರಿನ್ಸಿಪಾಲರಿಗೆ,

File 462-12 (Dip_ADm_2013)